# ಕರ್ನಾಟಕ ಗೃಹ ಮಂಡಳಿ

Karnataka Housing Board
Building communities

**ಸಂಖ್ಯೆ:ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ-4/ಶಿ.ಶಿ/ಪ್ರಕಟಣೆ/2021-22** **ದಿನಾಂಕ:20-12-2021**

## ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ಹಳಿಯೂರು ಗ್ರಾಮದಲ್ಲಿ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿ ಈಗಾಗಲೇ ಸಾರ್ವಜನಿಕ ಪ್ರಕಟಣೆಗಳ ಅನ್ವಯ ನಿವೇಶನಗಳನ್ನು ಲಾಟರಿ ಮೂಲಕ ಹಂಚಿಕೆ ಮಾಡಲಾಗಿರುತ್ತದೆ. ತದನಂತರ ಉಳಿದಿರುವ ವಿವಿಧ ವರ್ಗದ ನಿಯಮಿತ/ಅನಿಯಮಿತ (Odd) ಅಳತೆಯ ನಿವೇಶನಗಳಿಗೆ ಸಾರ್ವಜನಿಕರಿಂದ ಅನ್‌ಲೈನ್ ಮೂಲಕ ಆರಂಭಿಕ ಠೇವಣಿಯೊಂದಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿವೇಶನಗಳ ಮಾಹಿತಿಯನ್ನು ಮಂಡಳಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಆಸಕ್ತ ಸಾರ್ವಜನಿಕರು ಆನ್‌ಲೈನ್ ಮೂಲಕ ಅರ್ಜಿ ನೋಂದಾಯಿಸಿಕೊಳ್ಳಬಹುದಾಗಿರುತ್ತದೆ. ಆರಂಭಿಕ ಠೇವಣಿಯೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:15-01-2022 ಆಗಿರುತ್ತದೆ.

**ಹೆಚ್ಚಿನ ಮಾಹಿತಿಗಾಗಿ ಮಂಡಳಿಯ (WEBSITE) https://www.khb.karnataka.gov.in ಅನ್ನು ಸಂಪರ್ಕಿಸುವುದು.**

ದಿನಾಂಕ:20-12-2021.

ಉಪ ಪ್ರಧಾನ ವ್ಯವಸ್ಥಾಪಕರು(ಗ್ರಾ.ಸೇ)
ಕರ್ನಾಟಕ ಗೃಹ ಮಂಡಳಿ
ಬೆಂಗಳೂರು.

## ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ಬಡಾವಣೆಗೆ ಅರ್ಜಿ ಸಲ್ಲಿಸಲು ನಿಯಮ ಮತ್ತು ಷರತ್ತುಗಳು:-

1. ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ಹಳಿಯೂರು ಗ್ರಾಮದಲ್ಲಿ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿ ಈಗಾಗಲೇ ಸಾರ್ವಜನಿಕ ಪ್ರಕಟಣೆಗಳ ಅನ್ವಯ ನಿವೇಶನಗಳನ್ನು ಲಾಟರಿ ಮೂಲಕ ಹಂಚಿಕೆ ಮಾಡಲಾಗಿರುತ್ತದೆ. ತದನಂತರ ಉಳಿದಿರುವ ವಿವಿಧ ವರ್ಗದ ನಿಯಮಿತ/ಅನಿಯಮಿತ(Odd) ಅಳತೆಯ ನಿವೇಶನಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಆಸಕ್ತ ಸಾರ್ವಜನಿಕರು **www.khb.karnataka.gov.in** ವೆಬ್‌ಸೈಟ್ ಮುಖಾಂತರ ಪ್ರವರ್ಗವಾರು ಅರ್ಜಿಗಳನ್ನು ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣವನ್ನು **e-payment** ಮೂಲಕ ಪಾವತಿಸಿ ಅರ್ಜಿಗಳನ್ನು ನೋಂದಾಯಿಸಿಕೊಳ್ಳಬಹುದಾಗಿದೆ.

| ಕ್ರ.ಸಂ. | ಸ್ವತ್ತಿನ ವರ್ಗ | ಲಭ್ಯವಾಗುವ ಅಂದಾಜು ಸ್ವತ್ತುಗಳು | ಸ್ವತ್ತುಗಳ ಅಳತೆ ಮೀಟರ್‌ಗಳಲ್ಲಿ | ನೊಂದಣಿ ಶುಲ್ಕ ರೂ.ಗಳಲ್ಲಿ | ಆರಂಭಿಕ ಠೇವಣಿ |
|---|---|---|---|---|---|
| 1 | EWS | 37 | 6x9 | 300/- | 25,000/- |
| 2 | LIG | 28 | 9x12 | 500/- | 40,000/- |
| 3 | MIG | 49 | 9x15 | 1000/- | 60,000/- |
| 4 | HIG-I | 10 | 12x18 | 1500/- | 80,000/- |
| ವಿಶೇಷ ಸೂಚನೆ : ನಿವೇಶನಗಳಿಗೆ ಮಂಡಳಿ ನಿಗಧಿಪಡಿಸಿದ ದರ ಪ್ರತಿ ಚದರ ಮೀಟರ್‌ಗೆ ರೂ.8,150/- (ಪ್ರತಿ ಚದರ ಅಡಿಗೆ ರೂ.757/-) | | | | | |

2. ಆನ್‌ಲೈನ್ ಮೂಲಕ ಅರ್ಜಿ ನೋಂದಾಯಿಸಿಕೊಂಡು ಆರಂಭಿಕ ಠೇವಣಿ ಹಣವನ್ನು ಪಾವತಿಸಲು ಕೊನೆಯ ದಿನಾಂಕ: **15-01-2021** ಆಗಿರುತ್ತದೆ.
3. ಸ್ವತ್ತುಗಳನ್ನು ಪ್ರವರ್ಗವಾರು ವಿಂಗಡಿಸಿ ನಿವೇಶನಗಳನ್ನು ಇ-ಲಾಟರಿ ಮೂಲಕ ಹಂಚಿಕೆ ಮಾಡಲಾಗುವುದು.
4. ನಿವೇಶನಗಳನ್ನು ಒಂದೇ ಇಡಗಂಟಿನ (Outright sale) ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.
5. ಅರ್ಜಿ ಸಲ್ಲಿಸುವುದಕ್ಕೆ ಮೊದಲು 10 ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಕಾಲ ಅರ್ಜಿದಾರರು ಕರ್ನಾಟಕ ರಾಜ್ಯದ ಸಾಮಾನ್ಯ ನಿವಾಸಿಯಾಗಿರುವುದಕ್ಕೆ ಪ್ರಮಾಣಪತ್ರ ಅಪ್‌ಲೋಡ್ ಮಾಡಬೇಕು.
6. ಅರ್ಜಿದಾರರು ಕರ್ನಾಟಕ ಗೃಹ ಮಂಡಳಿ ಅಥವಾ ಇನ್ನಿತರೆ ಯಾವುದೇ ಸ್ಥಳೀಯ ಸಂಸ್ಥೆ/ಪ್ರಾಧಿಕಾರದಿಂದಾಗಲಿ ಮನೆ/ನಿವೇಶನ ಪಡೆದಿರುವುದಿಲ್ಲವೆಂದು ನೋಟರಿ ಮೂಲಕ ಪ್ರಮಾಣೀಕರಿಸಿ ಅಫಿಡವಿಟ್ ಪ್ರಮಾಣ ಪತ್ರವನ್ನು ಅಪ್‌ಲೋಡ್ ಮಾಡಬೇಕು.
7. ಆರ್ಥಿಕ ದುರ್ಬಲ ವರ್ಗದ (EWS) ನಿವೇಶನಗಳನ್ನು ಶೇ.50 ರಷ್ಟು ರಿಯಾಯಿತಿ ದರದಲ್ಲಿ ಹಂಚಿಕೆ ಮಾಡುತ್ತಿರುವುದರಿಂದ, ಆರ್ಥಿಕ ದುರ್ಬಲ ವರ್ಗದ ನಿವೇಶನಗಳಿಗೆ ಅರ್ಜಿ ಸಲ್ಲಿಸುವವರು ತಮ್ಮ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದ ಅರ್ಜಿದಾರರು ರೂ.32,000/- ಮತ್ತು ನಗರ ಪ್ರದೇಶದ ಅರ್ಜಿದಾರರು ವಾರ್ಷಿಕ ವರಮಾನ ರೂ.87,600/- ಮೀರದಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ತಹಸೀಲ್ದಾರರವರಿಂದ ಪಡೆದು ಅಪ್‌ಲೋಡ್ ಮಾಡಬೇಕು.
8. ಆರ್ಥಿಕ ದುರ್ಬಲ ವರ್ಗದ (EWS) ನಿವೇಶನಗಳನ್ನು ಶೇ.50 ರಷ್ಟು ರಿಯಾಯಿತಿ ದರದಲ್ಲಿ ಹಂಚಿಕೆ ಮಾಡುತ್ತಿರುವುದರಿಂದ 54 ಚ.ಮೀಟರ್ ನಂತರದ ಹಂಚಿಕೆಯಾದ ಹೆಚ್ಚುವರಿ ವಿಸ್ತೀರ್ಣಕ್ಕೆ ಮಂಡಳಿಯು ನಿಗದಿಪಡಿಸಿದ ಪೂರ್ಣ ದರ ವಿಧಿಸಲಾಗುವುದು.
9. ನಿವೇಶನ ಹಂಚಿಕೆಗಾಗಿ ಅರ್ಜಿ ಸಲ್ಲಿಸಿ ನೋಂದಣಿ ಪಡೆದ ಅರ್ಜಿದಾರರಿಗೆ ಅರ್ಜಿ ನೋಂದಣಿ ಶುಲ್ಕವನ್ನು ಮರುಪಾವತಿ ಮಾಡಲಾಗುವುದಿಲ್ಲ.
10. ನಿವೇಶನ ಹಂಚಿಕೆಯಾಗದ ಅರ್ಜಿದಾರರ ಆರಂಭಿಕ ಠೇವಣಿ ಹಣವನ್ನು ಯಾವುದೇ ಬಡ್ಡಿಯಿಲ್ಲದೆ ಮರುಪಾವತಿ ಮಾಡಲಾಗುವುದು.